


## ಉಪಯುಕ್ತ ಮಾಹಿತಿ

'ಸುಧಾ' ಅ.4ರ ಮುಖಪುಟ ಲೇಖನ ಆರ್.ರಾಜಶೇಖರರ 'ನಿಮ್ಮ ಹೃದಯ ನಿಮ್ಮ ಕೈಯಲ್ಲಿ' ಉಪಯುಕ್ತ ಮಾಹಿತಿ ಒಳಗೊಂಡಿತ್ತು.

–ಸು.ವಿಜಯಲಕ್ಷ್ಮಿ, ಪಿ.ಗೋವಿಂದರಾಜ್, ಶಿವಮೊಗ್ಗ/ ಹೇಕಮಂ ಮಧ್ಯಸ್ಥ ಫಲ್ಗುಣಿ/ ಡಾ.ಕೆ.ವಿ.ಸಂತೋಷ್, ಹೊಳಲ್ಕೆರೆ

## ಸಂಗ್ರಹಯೋಗ್ಯ ಸಂಚಿಕೆ!

ಆಧುನಿಕ ಜೀವನ ಶೈಲಿಯಿಂದ ಉದ್ಭವಿಸಿರುವ ಹಾಗೂ ದಿನೇ ದಿನೇ ಹೆಚ್ಚುತ್ತಿರುವ ಆರೋಗ್ಯ ಸಮಸ್ಯೆಗಳಾದ ಅಧಿಕ ರಕ್ತದೊತ್ತಡ, ಸಿಹಿಮೂತ್ರ ರೋಗ ಹಾಗೂ ಹೃದಯಬೇನೆಯ ಬಗೆಗಿನ ಲೇಖನ 40 ವರ್ಷ ದಾಟಿದ (ಹಾಗೂ ದಾಟದ) ವ್ಯಕ್ತಿಗಳಿಗೆ ದಾರಿದೀಪದಂತಿದೆ. ಆಂಗ್ಲ ಭಾಷೆಯ ನಾಲ್ಕಾರು ವೈದ್ಯಕೀಯ ಲೇಖನಗಳಲ್ಲಿ ಹುಡುಕಬೇಕಾದ ವಿಷಯಗಳನ್ನು ಕನ್ನಡದಲ್ಲಿ, ಅರ್ಥವಾಗುವಂತೆ ಬರೆದ ರಾಜಶೇಖರ್ ಅವರು ಅಭಿನಂದನಾರ್ಹರು. ಲೇಖನದಲ್ಲಿರುವ ಸೂಚನೆ, ಸಲಹೆಗಳನ್ನು ಪಾಲಿಸುವುದು ಅತ್ಯಗತ್ಯ. 4–5 ದಶಕಗಳ ಹಿಂದೆ ಮಕ್ಕಳಲ್ಲಿ ರ್‍ಯುಮಾಟಿಕ್ ಜ್ವರ ಹಾಗೂ ಯುವಕರಲ್ಲಿ ರ್‍ಯುಮಾಟಿಕ್ ಹೃದ್ರೋಗ ಬಹಳಷ್ಟಿತ್ತು. ಜೀವರಕ್ಷಕ ಔಷಧಿಗಳನ್ನು ಧಾರಾಳವಾಗಿ ಬಳಸುವ ಕಾರಣ ಈಗ ಈ ಸಮಸ್ಯೆ ಅಷ್ಟೊಂದಿಲ್ಲ.

ನನ್ನ ರೋಗಿಯೊಬ್ಬರಿಗೆ 'ಸುಧಾ' ಕೊಂಡು ಓದಿ, ಮನೆಯಲ್ಲಿಟ್ಟುಕೊಂಡು, ಸೂಚನೆಗಳನ್ನು ಪಾಲಿಸಲು ತಿಳಿಸಿದ್ದೇನೆ!

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

## ಚಿಂತನಾರ್ಹ ವಿಚಾರ

ವೈನತೇಯರ 'ಪುರುಷಾರ್ಥ ಪರಿಕಲ್ಪನೆ' ವಿಚಾರ ಲಹರಿ ಚಿಂತನಾರ್ಹವಾಗಿದೆ.

–ನೆ.ಲ.ರಾಂ, ಬೆಂಗಳೂರು

## ಗ್ರೆನೋಬೆಲ್ ಮರೆಯದ ನೆನಪು

ಮಾದರಿ ನಗರ 'ಗ್ರೆನೋಬಲ್' ಪ್ರವಾಸ ಕುರಿತಾದ ಲೇಖನ ಸಂತಸ ತಂದಿತು.

–ಚಂದ್ರಕಾಂತ ಕರದಳ್ಳಿ, ಶಹಾಪುರ/ ಎಚ್. ಆನಂದಕುಮಾರ್, ಚಿತ್ರದುರ್ಗ

## ಮಹಿಳೆಗೆ ರಾತ್ರಿ ಆತಂಕವಿಲ್ಲ

'ಪಟ್ಟಾಯದಲ್ಲಿ ನೋಡಿದ್ದು' ನಾಗರತ್ನ ಶ್ರೀನಿವಾಸ್‌ರ ಚಿತ್ರಲೇಖನ ರಂಜಿಸಿತು. ಪಟ್ಟಾಯದಲ್ಲಿ ಮಧ್ಯರಾತ್ರಿಯೂ ಹೆಣ್ಣುಮಕ್ಕಳು ಆತಂಕವಿಲ್ಲದೆ ನಡೆದಾಡಬಹುದು ಎಂದು ಓದಿ ಸಂತಸವಾಯಿತು.

–ತರಂಗಿಣಿ, ತುಮಕೂರು

## ಆಸಕ್ತಿದಾಯಕ

'ಲೋಬೊ ಎಂಬ ಕರೆನ್ಸಿ ಖಜಾನೆ' ವಿದ್ಯಾ ಹಾಲಬಾವಿಯವರ ಲೇಖನ ಆಸಕ್ತಿದಾಯಕವಾಗಿತ್ತು.

–ಪ್ರಭುಪ್ರಸಾದ್ ನಡುತೋಟ, ಶೃಂಗೇರಿ

## ನಟನೆಯಲ್ಲಿ ತಾದಾತ್ಮ್ಯ

ನಟನೆಯಲ್ಲಿ ತಾದಾತ್ಮ್ಯ ಹೊಂದುವ ನಟರ ಸಾಲಿನಲ್ಲಿ ಎ.ಕೆ.ಹಂಗಲ್ ಅಗ್ರಗಣ್ಯರು. ಹಾಗಾಗಿ 'ಈ ಚಾಚಾನಿಗೆ ಸರಿಸಾಟಿಯಿಲ್ಲ!' ಎಂಬ ಲೇಖಕ ನಾ.ದಿವಾಕರರ ಅಭಿಪ್ರಾಯ ಸರಿಯಾಗಿಯೇ ಇದೆ.

–ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ರವೀಂದ್ರನಾಥ ಶಿ.ಯಡಹಳ್ಳಿ, ಬೀಳಗಿ/ ಮಲ್ಲಿಕಾರ್ಜುನ ಗಚ್ಚಿ, ಗೋಗಿ

## ಹಿಡಿಸಿದ ಪೌರಾಣಿಕ ಕಥೆ

ಟಿ.ಎಂ. ಸುಬ್ಬರಾಯರ 'ಋತುಪರ್ಣ' ಪೌರಾಣಿಕ ಕಥೆ ತುಂಬಾ ಹಿಡಿಸಿತು. ಮನೋಹರ್ ಚಿತ್ರ ಚೆನ್ನಾಗಿತ್ತು. ಪ್ರತಿವಾರವೂ ಪೌರಾಣಿಕ ಕಥೆ ಪ್ರಕಟಿಸಿ.

–ಪಿ.ಎಸ್.ನಾರಾಯಣ ಭಟ್, ಕೊಯಿಲ/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ

## ಆಪ್ತ ಮಾತುಕತೆ

'ಚಿತ್ರಸುಧಾ'ದಲ್ಲಿ ರಚಹ ಅವರು ಚಿತ್ರನಟ ಕೋಮಲ್ ಜತೆ ನಡೆಸಿದ ಮಾತುಕತೆ ಆಪ್ತವಾಗಿ ಮೂಡಿಬಂದಿದೆ.

–ಕೆ.ಜಿ.ಮಂಜುಳಾ, ಚಿತ್ರದುರ್ಗ


